166	ಮಹಾದೇವಿ ಗಂಡ ಸೈಬಣ್ಣ	ಕಮಲಾಪೂರ	ಮಾದಿಗ	230	2.20	ಖುಷ್ಕಿ
167	ಲಕ್ಷ್ಮೀಬಾಯಿ ಗಂಡ ಗುರಪ್ಪ	ಕಮಲಾಪೂರ	ಹೊಲೆಯ	23	2.03	ಖುಷ್ಕಿ
168	ವಿಮಲಾಬಾಯಿ ಗಂಡ ಚಂದಪ್ಪ	ಕಮಲಾಪೂರ	ಹೊಲೆಯ	23	2.03	ಖುಷ್ಕಿ
169	ಸುಂದ್ರಮ್ಮಾ ಗಂಡ ವೀರಶೆಟ್ಟಿ	ಕಮಲಾಪೂರ	ಹೊಲೆಯ	23	2.03	ಖುಷ್ಕಿ
170	ಸುಭದ್ರಾ ಗಂಡ ಮಲ್ಲಪ್ಪಾ	ಕಮಲಾಪೂರ	ಹೊಲೆಯ	23	2.03	ಖುಷ್ಕಿ
171	ಸೇಕಮ್ಮಾ ಗಂಡ ರಾಯಪ್ಪಾ	ಜೀವಣಗಿ.ಕೆ	ಮಾದಿಗ	120/A	2.06	ಖುಷ್ಕಿ
172	ಗಂಗಮ್ಮಾ ಗಂಡ ರಾಯಣ್ಣಾ	ಜೀವಣಗಿ.ಕೆ	ಮಾದಿಗ	120/A	2.05	ಖುಷ್ಕಿ
173	ನೀಲವ್ವ ಗಂಡ ಚಂದ್ರಾಮ	ಜೀವಣಗಿ.ಕೆ	ಮಾದಿಗ	120/A	2.05	ಖುಷ್ಕಿ
174	ಮರಮ್ಮಾ ಗಂಡ ಮಲ್ಕಪ್ಪಾ	ಜೀವಣಗಿ.ಕೆ	ಮಾದಿಗ	120/A	2.18	ಖುಷ್ಕಿ
175	ಶಾಮಬಾಯಿ ಗಂಡ ಯಲ್ಲಪ್ಪಾ	ಜೀವಣಗಿ.ಕೆ	ಮಾದಿಗ	120/A	2.18	ಖುಷ್ಕಿ
176	ತಿಪ್ಪವ್ವ ಗಂಡ ಭೀಮಣ್ಣಾ	ಜೀವಣಗಿ.ಕೆ	ಹೊಲೆಯ	76/A	2.18	ಖುಷ್ಕಿ
177	ಸುರಮ್ಮಾ ಗಂಡ ಮರೆಪ್ಪಾ	ಜೀವಣಗಿ.ಕೆ	ಹೊಲೆಯ	76/A	2.18	ಖುಷ್ಕಿ
178	ಮರಗಬಾಯಿ ಗಂಡ ತಿಮ್ಮಣ್ಣಾ	ಜೀವಣಗಿ.ಕೆ	ಹೊಲೆಯ	76/A	2.18	ಖುಷ್ಕಿ
179	ಯಲ್ಲಮ್ಮಾ ಗಂಡ ಕಲ್ಲಪ್ಪಾ	ಜೀವಣಗಿ.ಕೆ	ಹೊಲೆಯ	76/A	2.18	ಖುಷ್ಕಿ

826 (699) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪುತ್ತೂರು–ಬಂಟ್ವಾಳ–ಸುಳ್ಯ ತಾಲ್ಲೂಕಿನಲ್ಲಿ ಹ್ಯಾಮ್ಲಟ್ ಯೋಜನೆಯಡಿಯಲ್ಲಿ ಮಂಜೂರಾದ ಯೋಜನೆಗಳು ಯಾವುವು;

ಆ) ಸದರಿ ಕಾಮಗಾರಿಗಳಲ್ಲಿ ಅನುಷ್ಠಾನಗೊಂಡು ಸಂಪರ್ಕ ನೀಡಿರುವ ಕಾಮಗಾರಿಗಳು ಯಾವುವು;

ಇ) ಉಳಿದ ಕಾಮಗಾರಿಗಳು ಅನುಷ್ಠಾನಗೊಳ್ಳದಿರಲು ಕಾರಣವೇನು;

ಈ) ಅನುಷ್ಠಾನ ಮಾಡದ ಕಾಮಗಾರಿ ಟೆಂಡರ್ ಅವಧಿಯಲ್ಲಿ ಕೆಲಸ ಮುಗಿಸದ ಗುತ್ತೆಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ;

ಉ) ಇಲ್ಲವಾದಲ್ಲಿ ಕಾರಣಗಳೇನು;

ಊ) ಉಳಿದಿರುವ ಕಾಮಗಾರಿಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಲ್ಲಿ ಈ ಯೋಜನೆ ಇರುವುದಿಲ್ಲ.

ಆ) – ಉದ್ಭವಿಸುವುದಿಲ್ಲ –

ಇ) – ಉದ್ಭವಿಸುವುದಿಲ್ಲ –

ಈ) – ಉದ್ಭವಿಸುವುದಿಲ್ಲ –

ಉ) – ಉದ್ಭವಿಸುವುದಿಲ್ಲ –

ಊ) – ಉದ್ಭವಿಸುವುದಿಲ್ಲ –

827(702) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪುತ್ತೂರು–ಸುಳ್ಯ–ಬಂಟ್ವಾಳ ತಾಲ್ಲೂಕುಗಳಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ದೋಷ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಂಟ್ವಾಳ ತಾಲ್ಲೂಕು ಇಡ್ಡಿಡು ಗ್ರಾಮದಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಮುಕ್ತಾಯಗೊಳಿಸಲಾಗುವುದು (ವಿವರ ನೀಡುವುದು)

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ಬಂದಿದೆ.

ಆ) ಬಂಟ್ವಾಳ ತಾಲ್ಲೂಕಿನ ಇಡ್ಡಿಡು ಗ್ರಾಮದಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಪ್ರಸ್ತಾವನೆ ಇರುವುದಿಲ್ಲ. ಆದರೆ ಪುತ್ತೂರು, ಬಂಟ್ವಾಳ ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಪುತ್ತೂರು ಬಳಿಯ ನೆಟ್ಲ ಮುದನೂರಿನಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಇ) ಪುತ್ತೂರು ಬಳಿಯ ನೆಟ್ಲ ಮುದನೂರಿನಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಸದರಿ ಕಾಮಗಾರಿ ಪ್ರಗತಿಯಲ್ಲಿದೆ. ಏಪ್ರಿಲ್ 2005ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿಯನ್ನು ಗುತ್ತಿಗೆದಾರರಿಗೆ ನಿಗದಿಪಡಿಸಲಾಗಿದೆ.

ಕಾಮಗಾರಿಯ ವಿವರಗಳು:–

1)	ಕಾಮಗಾರಿಯ ಹೆಸರು	ಪುತ್ತೂರು ತಾಲ್ಲೂಕಿನ ನೆಟ್ಲಮುದನೂರಿನಲ್ಲಿ 2X100 ಎಂ.ವಿ.ಎ. 220/110 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆ.
2)	ಕಾಮಗಾರಿಯ ಅಂದಾಜು ವೆಚ್ಚ	ರೂ.4060 ಲಕ್ಷಗಳು
3)	ಕಾಮಗಾರಿಯ ಗುತ್ತಿಗೆದಾರರ ಹೆಸರು	ಮೆ.ಎ.ಬಿ.ಬಿ.
4)	ಗುತ್ತಿಗೆ ಕರಾರಿನ ಪ್ರಕಾರ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುವ ದಿನಾಂಕ	16–04–2005

828(1467): ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೂತನ ತಾಲ್ಲೂಕುಗಳ ರಚನೆಗೆ ಸರ್ಕಾರ ಕ್ರಮ ಜರುಗಿಸುತ್ತಿದೆಯೇ, ಹೌದಾದಲ್ಲಿ, ಅದರ ವಿವರಗಳೇನು;